ಅಲ್ಲದೆ, ದಿನಾಂಕ:05–02–2007ರಲ್ಲಿ ಕಾವೇರಿ ಜಲ ವಿವಾದದ ಅಂತಿಮ ತೀರ್ಪಿನಲ್ಲಿ ಸೋಮವಾರಪೇಟೆ ಏತ ನೀರಾವರಿ ಯೋಜನೆ ಹೊರತು ಪಡಿಸಿ ಬೇರೆ ಏತ ನೀರಾವರಿ ಯೋಜನೆಗೆ ನೀರಿನ ಹಂಚಿಕೆಯನ್ನು ಪರಿಗಣಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗಳ ಬಗ್ಗೆ ಯಾವುದೇ ಕ್ರಮ ವಹಿಸಿರಲಿಲ್ಲ. ರಾಜ್ಯವು ಸದರಿ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲ ಯದಲ್ಲಿ ವಿಶೇಷ ಅನುಮತಿ ಅರ್ಜಿಯನ್ನು ದಾಖಲಿಸಿದ್ದು, ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ನಂತರ ಸದರಿ ಯೋಜನೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

533 ಶ್ರೀ ಎ.ಮಂಜು : ಮಾನ್ಯ ಜಲಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಜೀವ ನದಿ ಕಾವೇರಿ ನದಿಗೆ ಮೊದಲನೆಯ ಕಟ್ಟೆ ಕಟ್ಟಿಪುರ ಎಂಬಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಕಟ್ಟಿಪುರ ಕಟ್ಟೆಯನ್ನು ಆಧುನೀಕರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ರೈತರ ಜೀವ ನದಿ ಕಾವೇರಿ ನದಿಗೆ ಮೊದಲನೆಯ ಅಣೆಕಟ್ಟು ಕಟ್ಟಿಪುರ ಎಂಬಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಳೆಯದಾದ ಕಟ್ಟಿಪುರ ಅಣೆಕಟ್ಟೆ ಹಾಗೂ ಅದರ ನಾಲೆಗಳನ್ನು ಆಧುನೀಕರಿಸುವ ಉದ್ದೇಶ ಸರ್ಕಾರಕ್ಕೆ ಇದೆ.

ಇ) ಕಟ್ಟಿಪುರ ಅಣೆಕಟ್ಟೆ ಹಾಗೂ ಅದರ ನಾಲೆಗಳನ್ನು ಆಧುನೀಕರಿಸುವ ಕಾಮಗಾರಿಗೆ ಸಂಬಂಧಿಸಿದ ಸರ್ವೆ ಕಾರ್ಯ ಪೂರ್ಣಗೊಳಿಸಿ, ಡಿ.ಪಿ.ಆರ್. ಅನ್ನು ತಯಾರಿಸಿ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪಸಮಿತಿ ಹಾಗೂ ಮಂಡಳಿಯ ತೆರವು ಪಡೆದು ನಂತರ ಕೇಂದ್ರ ಜಲ ಆಯೋಗಕ್ಕೆ ಈಗಾಗಲೇ ಸಲ್ಲಿಸಿದ್ದು, ಕೇಂದ್ರ ಜಲ ಆಯೋಗದಿಂದ ತೀರುವಳಿ ಹಾಗೂ ಕೇಂದ್ರ ಸರ್ಕಾರದ ಅನುದಾನವನ್ನು ಪಡೆದು ಆಡಳಿತಾತ್ಮಕ ಅನುಮೋದನೆ ನೀಡಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು.